(ಶ್ರೀ ಬಿ. ಡಿ. ಜತ್ತಿ)

ಧಾನ್ಯದ ಮೇಲೆ ಹಾಕಿರತಕ್ಕವರು ಬೆಲೆಯನ್ನು ಜಾಸ್ತಿ ಮಾಡುತ್ತಾರೆ. ಆದ್ದರಿಂದ ಅದನ್ನು ತಪ್ಪಿಸುವ ನಲುವಾಗಿ ಅವರು ಡೆಪ್ಯುಟಿ ಕಮೀಷನರಿಂದ ಪರ್ಮಿಷನ್ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಈ ಆಹಾರಧಾನ್ಯದ ಲೆವಿ ಸಿಸ್ಟಮ್ ಹಿಂದೆ ಮೈಸೂರು ದೇಶದಲ್ಲಿ ಬಂದಿತ್ತು. ಆಗ ರೈತರಿಗೆ ತೊಂದರೆಯಾಗುತ್ತದೆ ಎಂದು ಸರ್ಕಾರಕ್ಕೆ ತಿಳಿಸಿದಾಗ ಅದನ್ನು ಬದಲಾವಣೆ ಮಾಡಿ ಎಷ್ಟು ಲೆವ್ಯಿ ಹಾಕಿದ್ದರೋ ಅದರಲ್ಲಿ ಇಷ್ಟು ಭಾಗವನ್ನು ವಸೂಲು ಮಾಡಬೇಕೆಂದು ಮಾಡಿದರು. ಈಗ ಸರ್ಕಾರದವರು ಏನು ಲೆವಿ ಸಿಸ್ಟಮ್ ಮಾಡಿದ್ದಾರೆಯೋ ಅದರಿಂದ ಬ್ಲಾಕ್ ಮಾರ್ಕೆಟಿಯರುಗಳಿಗೆ ಪ್ರೋತ್ಸಾಹ ಮಾಡಿದಂತಾಗಿದೆ. ಆದ್ದರಿಂದ ಸರ್ಕಾರದವರು ಈಗ ಮಾಡಿರತಕ್ಕ ಲೆವಿ ಸಿಸ್ಟಂ ಅನ್ನು ಬದಲಾವಣೆ ಮಾಡಿ ಪೂರ್ ಪ್ರೂಫ್ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ಈಗ ಮಾಡಿರತಕ್ಕ ಲೆವ್ಯಿ ಸಿಸ್ಟಮ್ ಅನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಈ ವರ್ಷ ಪುನರ್ ವಿಮರ್ಶೆ ಮಾಡುವುದಕ್ಕೆ ಸಾಧ್ಯವಿಲ್ಲ. ಮುಂದಿನ ವರ್ಷ ನೀವೇನಾದರೂ ಸಲಹೆ ನೀಡಿದರೆ ಅದನ್ನು ಯೋಚನೆ ಮಾಡುತ್ತೇವೆ.

ಶ್ರೀ ಎಸ್. ಗೋಪಾಲ ಗೌಡ.—ಈ ಲೆವಿ ಆಜ್ಞೆಯನ್ನು ಭಾರತ ಸರ್ಕಾರದ ರಕ್ಷಣಾ ಕಾನೂನಿನ ನಿಯಮಗಳ ಪ್ರಕಾರ ಮಾಡಿದ್ದಾರೆ. ಅದೇ ಪ್ರಕಾರ ಬೆಲೆಗಳನ್ನೂ ಗೊತ್ತು ಮಾಡಿದ್ದಾರೆ. ಈಗ ಆಹಾರದ ಕಾರ್ಪೊರೇಷನ್ನಿನವರು ಹಣವನ್ನು ತೆಗೆದುಕೊಂಡು ಬಂದು ಆಹಾರವನ್ನು ಕೊಳ್ಳತಕ್ಕ ಒಂದು ಜವಾಬ್ದಾರಿಯನ್ನು ಮಾತ್ರ ನಿರ್ವಹಿಸುತ್ತಿದ್ದಾರೆ. ಅವರು ಸರ್ಕಾರದ ಅಧೀನದಲ್ಲಿ ಕೆಲಸ ಮಾಡುತ್ತಿದ್ದಾರೆಯೇ ಅಥವಾ ಅವರ ಒಂದು ಕಾರ್ಯಕ್ರಮದಂತೆ ನಡೆದುಕೊಂಡು ಹೋಗುತ್ತಾರೆಯೇ?

ಶ್ರೀ ಬಿ. ಡಿ. ಜತ್ತಿ.—ಫುಡ್ ಕಾರ್ಪೊರೇಷನ್ನಿನವರು ಸರ್ಕಾರದ ಏಜೆಂಟರಾಗಿ ಕೆಲಸ ಮಾಡುತ್ತಿದ್ದಾರೆ.

Procurement Policy for Jowar and Wheat.

*Q.—199. Sri A. J. DODDAMETI (Ron).—

Will the Government be pleased to state :—

(a) whether it is fact that Government has notified procurement policy on levy basis per acre for Jowar and Wheat at 25 Kgs. per acre ;

(b) whether they are aware that the yield of Jowar when compared to wheat per acre is much more or about treble the quantity of Wheat ;

(c) if so, the reasons for equating Jowar with Wheat for equal levy per acre ?

A.— Sri B. D. JATTI (Minister for Food).—

(a) The scale for sale of Jowar and Local Wheat is as follows :—

(1) In respect of first acre of the holding of the grower.	Nil.
(2) In respect of every acre of the next nine acres of the holding of the grower.	Twenty-five Kilograms per acre.
(3) In respect of every acre of the remaining acre of the holding of the grower.	Thirty Kilograms per acre.

(b) and (c) Government are aware that the yield of Jowar is more than the yield of wheat per acre. A very low scale of levy has been prescribed for both Jowar and Wheat in order to ensure that no hardship is caused to the growers.

ಶ್ರೀ ಎ. ಜೆ. ದೊಡ್ಡಮೇಟಿ.—ಈಗ ಸರ್ಕಾರದ ಧಾನ್ಯವನ್ನು ಅಜ್ಞೆಯ ಪ್ರಕಾರ ಎಕರೆಯೊಂದಕ್ಕೆ 25 ಕೆ.ಜಿ.ಯಂತೆ ಜೋಳ ಮತ್ತು ಗೋಧಿಯನ್ನು ಸಂಗ್ರಹಣ ಮಾಡುತ್ತಿದ್ದುದನ್ನು ಬದಲಾಯಿಸಿ 12½ ಕೆ.ಜಿ.ಗೆ ಇಳಿಸುತ್ತಾರೆಯೇ ?

†ಶ್ರೀ ಬಿ. ಡಿ. ಜತ್ತಿ.—ಈಗ ಆಹಾರ ಧಾನ್ಯವನ್ನು ಅಲ್ಪಪ್ರಮಾಣದಲ್ಲಿ ರೈತರಿಂದ ವಸೂಲು ಮಾಡಬೇಕೆಂದು ಎಕರೆಯೊಂದಕ್ಕೆ 25 ಕೆ.ಜಿ.ಯಂತೆ ಜೋಳ ಮತ್ತು ಗೋಧಿಯನ್ನು ವಸೂಲು ಮಾಡಬೇಕೆಂದು ಆಜ್ಞೆಮಾಡಿದೆ. ಆದರೆ ಬೆಳೆ ಬಂದಿರದಿದ್ದರೆ ವಸೂಲ ಮಾಡಬಾರದು ಮತ್ತು ಕಡಿಮೆ ಪ್ರಮಾಣದಲ್ಲಿ ಬೆಳೆ ಬಂದಿದ್ದರೆ ಕಡಿಮೆ ವಸೂಲು ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಡಲಾಗಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಧಾರವಾಡ ಜಿಲ್ಲೆಯಲ್ಲಿ ಬೆಳೆಯು ಚೆನ್ನಾಗಿ ಬಂದಿಲ್ಲ ಎಂಬುದು ಸರ್ಕಾರದ ಲಕ್ಷ್ಯಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಕೆಲವು ಕಡೆ ಕಡಿಮೆ ಬೆಳೆ ಬಂದಿದೆ. ಅಷ್ಟು ಮಾತ್ರ ನನಗೆ ಗೊತ್ತಿದೆ.

ಶ್ರೀ ಸಿ. ಎಸ್. ಪುರೋಹಿತ.—ಈ ಸಾರಿ ಅಲ್ಲಿ ಬೆಳೆಯು ಚೆನ್ನಾಗಿ ಬಾರದೆ ಇರುವುದರಿಂದ ಅಲ್ಲಿ ಧಾನ್ಯ ವಸೂಲು ಮಾಡುವುದನ್ನು 10-15 ಕೆ.ಜಿ.ಗೆ ಇಳಿಸುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಬಿ. ಡಿ. ಜತ್ತಿ.—ಈಗ ವರ್ಷದ ಮಧ್ಯದಲ್ಲಿ ಲೆವಿ ಆಜ್ಞೆಯನ್ನು ಬದಲು ಮಾಡುವುದಕ್ಕೆ ಸಾಧ್ಯವಿಲ್ಲ. ಎಲ್ಲಿ ಬೆಳೆ ಕಡಿಮೆ ಆಗಿದೆಯೋ ಅಂಥಾ ಕಡೆ ಕಡಿಮೆ ವಸೂಲು ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಆಜ್ಞೆಯನ್ನು ಕೊಟ್ಟಿದ್ದೇವೆ.

ಶ್ರೀ ಬಿ. ಚನ್ನಬಸಪ್ಪಗೌಡ.—ಜೋಳವನ್ನು ಒಂದು ಕ್ವಿಂಟಾಲಿಗೆ 55 ರೂಪಾಯಿಗಳಂತೆ ಕೊಂಡುಕೊಂಡು 85 ರೂಪಾಯಿಗಳಂತೆ ವಾರಾಟ ಮಾಡುತ್ತಿದ್ದಾರೆ. 30 ರೂಪಾಯಿಗಳು ಮಾರ್ಜಿನ್ ಪ್ರಾಫಿಟ್ ಆಯಿತು. ಆದ್ದರಿಂದ ಅದನ್ನು ಕಡಿಮೆ ಬೆಲೆಗೆ ಮಾರುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಕಾಸ್ಟ್-ಷೀಟ್ ವರ್ಕ್‌ಔಟ್ ಮಾಡಿದ್ದೇವೆ. ಆದಷ್ಟು ಕಡಿಮೆ ಬೆಲೆಗೆ ಮಾರುವುದಕ್ಕೆ ಪ್ರಯತ್ನ ಮಾಡುತ್ತೇವೆ. ಯಾವುದನ್ನು ಕಡಿಮೆ ಮಾರುವುದಕ್ಕೆ ಬರುತ್ತದೆಯೋ ಅದನ್ನು ವಿಚಾರ ಮಾಡುತ್ತೇವೆ.

Sri M. R. PATIL.—Sir, is the Government aware that the average yield per acre of wheat in the State is generally half of the yield per acre of jowar and if so, will the Government consider the question of the quantum of levy atleast for the next year ?

Sri B. D. JATTI.—Definitely.

ಶ್ರೀ ಎಂ. ಆರ್. ಪಾಟೀಲ್.—ಈ ಪ್ರೊಕ್ಯೂರ್‌ಮೆಂಟ್ ಪಾಲಸಿಯಲ್ಲಿ ನಜ್ಜೆ, ಸಾವೆಯನ್ನು ತೆಗೆದುಕೊಳ್ಳಬಾರದೆಂದು ಏನಾದರೂ ಇದೆಯೆ ?

ಶ್ರೀ ಬಿ. ಡಿ. ಜತ್ತಿ.—ತೆಗೆದುಕೊಳ್ಳುವುದಕ್ಕೆ ತೊಂದರೆಯಿಲ್ಲ.

ಶ್ರೀ ಎಂ. ಆರ್. ಪಾಟೀಲ್.—ಈಗ ನಜ್ಜೆಯನ್ನು ತೆಗೆದುಕೊಳ್ಳುತ್ತಿರೋ ಇಲ್ಲವೋ ?

ಶ್ರೀ ಬಿ. ಡಿ. ಜತ್ತಿ.—ಕೊಟ್ಟರೆ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ಎಂ. ದೇಸಾಯಿ.—ಬೆಳಗಾಂ ಜಿಲ್ಲೆಯಲ್ಲಿ ಮುಂಡಗಿ ಮತ್ತು ಸೌಂದತ್ತಿ ಭಾಗದಲ್ಲಿ ನಜ್ಜೆಯನ್ನು ಆಫೀಸರ್‌ಗಳು ಅಕ್ಸೆಪ್ಟ್ ಮಾಡುತ್ತಿಲ್ಲ. ನಜ್ಜೆಯನ್ನು ಹೊರಗಡೆ ವಾರಾಟ ಮಾಡುತ್ತಾ ಇದ್ದಾರೆ. ಆದ್ದರಿಂದ ಹೊರಗಡೆ ಕೊಂಡುಕೊಳ್ಳಬೇಕಾದ ಪ್ರಮೇಯ ಬಂದಿದೆ.

ಶ್ರೀ ಬಿ. ಡಿ. ಜತ್ತಿ.—ಅವಶ್ಯವಿದ್ದರೆ ಯೋಗ್ಯಕ್ರಮ ತೆಗೆದುಕೊಂಡು ನಿರ್ಬಂಧಿಸುತ್ತೇವೆ.

ಶ್ರೀ ಎ. ಎಸ್. ಲಕ್ಷ್ಮೀಕಾಂತಪ್ಪ.—ಈ ಲೆವಿ ಸಿಸ್ಟಮ್ ಹಾಕಿದ್ದರೂ ಸಹ ರೆವಿನ್ಯೂ ಮತ್ತು ಪೋಲೀಸ್ ಅಧಿಕಾರಿಗಳಿಗೆ ಲಂಚಕ್ಕೆ ಅವಕಾಶವಾಗಿದೆ. ಈ ಲಂಚವನ್ನು ತಡೆಗಟ್ಟುವುದಕ್ಕೆ ಏನು ಮಾಡುತ್ತೀರಿ ?

ಶ್ರೀ ಬಿ. ಡಿ. ಜತ್ತಿ.—ಲೆವಿಗೂ ಲಂಚಕ್ಕೂ ಏನೂ ಸಂಬಂಧವಿಲ್ಲ.

ಶ್ರೀ ಎಸ್. ಗೋವಾಲಗೌಡ.—ಕಳೆದ ವರ್ಷ ಮಳೆ ಅಭಾವದಿಂದ ಬೆಳೆಗಳಿಗೆ ಆದ ನಷ್ಟವನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಈ ಲೆವಿ ಆಜ್ಞೆಯನ್ನು ಈಗಲಾದರೂ ಪುನರ್ ವಿಮರ್ಶಿಸಿ ಎಲ್ಲೆಲ್ಲಿ ಬೆಳೆ ಆಗಿಲ್ಲವೋ ಅಲ್ಲಿ ಲೆವಿಯನ್ನು ವಸೂಲು ಮಾಡುವುದಿಲ್ಲವೆಂದು ಮತ್ತು ಸರ್ಕಾರದವರು ಮಾರ್ಕೆಟ್ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ಕೊಂಡುಕೊಳ್ಳಲು ಪರಿಶೀಲನೆ ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಈಗಾಗಲೇ ಉತ್ತರ ಹೇಳಿದ್ದೇನೆ. ಎಲ್ಲ ಬೆಳೆಯಾಗಿಲ್ಲವೋ ಅಲ್ಲ ತೆಗೆದುಕೊಳ್ಳುವುದಿಲ್ಲ. ಕಡಿಮೆ ಬೆಳೆಯಾಗಿರುವ ಕಡೆಗಳಲ್ಲಿ ಕಡಿಮೆ ತೆಗೆದುಕೊಳ್ಳುವುದಕ್ಕೆ ಡಪ್ಯುಟಿ ಕಮೀಷನರ್‌ಗಳಿಗೆ ಆಜ್ಞೆ ಕೊಟ್ಟಿದೆ.

ಶ್ರೀ ಎಸ್. ಶಿವಪ್ಪ.—ಸರ್ಕಾರದವರು ಧಾನ್ಯವನ್ನು ಕೊಂಡುಕೊಳ್ಳುತ್ತೇವೆಂದು ಹೇಳುತ್ತಾರೆ. ಈಗ ಕೋ-ಆಪರೇಟಿವ್ ಸೊಸೈಟಿಯವರು ಓಪನ್ ಮಾರ್ಕೆಟ್‌ನಲ್ಲಿ ಕೊಂಡುಕೊಳ್ಳುತ್ತಾರೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಎರಡು ತರಹ ಕೊಂಡುಕೊಳ್ಳುವುದು ಬೇಡ. ಒಂದನ್ನು ಮನ್ನಾಮಾಡಿ; ಸರ್ಕಾರದವರೇ ಓಪನ್ ಮಾರ್ಕೆಟ್‌ನಲ್ಲಿ ಕೊಂಡುಕೊಳ್ಳುವುದಾದರೆ ರೈತರಿಗೆ ಅನುಕೂಲವಾಗುತ್ತದೆ. ಲೆವಿ ಮುಖಾಂತರ ತೆಗೆದುಕೊಂಡರೆ ಅವರಿಗೆ ಅನಾನುಕೂಲವಾಗುತ್ತದೆ. ಆದ್ದರಿಂದ ಒಂದು ಏಕೀಕೃತವಾದ ಆರ್ಡರನ್ನು ಹೊರಡಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆಯೆ ?

ಶ್ರೀ ಬಿ. ಡಿ. ಜತ್ತಿ.—ಸರ್ಕಾರದವರು ಓಪನ್ ಮಾರ್ಕೆಟ್ಟಿನಲ್ಲಿ ಕೊಂಡಿಲ್ಲ. ಕೊಳ್ಳುವ ವಿಚಾರವೂ ಸಹ ಇಲ್ಲ. ಆದರೆ ಖಾಸಗೀ ವರ್ತಕರು ಯಾವ ರೀತಿ ಓಪನ್ ಮಾರ್ಕೆಟ್‌ನಲ್ಲಿ ಕೊಂಡು ಕೊಳ್ಳುತ್ತಾರೋ, ಅದೇ ರೀತಿ ಕೋ-ಆಪರೇಟಿವ್ ಸೊಸೈಟಿಯವರು ಸಹ ಕೊಂಡುಕೊಳ್ಳಬಹುದು. ನಾವು ಬೇಡ ಎಂದು ಹೇಳುವುದಕ್ಕೆ ಆಗುವುದಿಲ್ಲ. ಎಲ್ಲಿಯವರೆಗೆ ಇನ್‌ಫಾರ್‌ಮಲ್ ರೇಷನಿಂಗ್ ಇಲ್ಲವೋ, ಅಲ್ಲಿಯವರೆಗೆ ಕೋ-ಆಪರೇಟಿವ್ ಸೊಸೈಟಿಯವರು ವರ್ತಕರು ಓಪನ್ ಮಾರ್ಕೆಟ್‌ನಲ್ಲಿ ಕೊಂಡುಕೊಳ್ಳುವಂತೆ ಕೊಂಡುಕೊಳ್ಳಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರ್ಕಾರದವರು ಸೆಪ್ಟೆಂಬರ್ ತಿಂಗಳ ಹೊತ್ತಿಗೆ ಎಲ್ಲಾ ಆಹಾರ ಧಾನ್ಯಗಳನ್ನು ತಾವೇ ಕೊಂಡುಕೊಳ್ಳುತ್ತೇವೆಂದು ಒಂದು ಆಜ್ಞೆಯನ್ನು ಮಾಡಿದ್ದಾರೆ, ಆಗ ಪ್ರೊಕ್ಯೂರ್‌ಮೆಂಟ್ ತಮ್ಮ ಸ್ವಾಧೀನದಲ್ಲಿರುತ್ತದೋ ಅಥವಾ ಕಾರ್ಪೊರೇಷನ್ ಕೈಯಲ್ಲಿ ಕೊಡುತ್ತೀರೋ ?

ಶ್ರೀ ಬಿ. ಡಿ ಜತ್ತಿ.—ವಿನಾಪಲ್ಲಿ ಪ್ರೊಕ್ಯೂರ್‌ಮೆಂಟ್‌ನಲ್ಲಿ ಬಹಳ ಮಟ್ಟಿಗೆ ಫುಡ್ ಕಾರ್ಪೊರೇಷನಿಗೆ ನಮ್ಮ ಸ್ಟೇಟ್‌ನಲ್ಲಿ ಕೆಲಸಕಾರ್ಯಗಳೇನೂ ಇರುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಖಾಸಗೀ ಸಂಸ್ಥೆಗಳು ಮತ್ತು ಸಹಕಾರ ಸಂಘಗಳು ಧಾನ್ಯ ಕೊಂಡರೆ ಅವರಿಗೆ ಆಗತಕ್ಕಂಥ ನಷ್ಟಕ್ಕೆ ಸರ್ಕಾರದವರು ಏನಾದರೂ ಸಹಾಯ ಮಾಡುತ್ತಾರೆಯೇ ?

ಶ್ರೀ ಬಿ. ಡಿ. ಜತ್ತಿ.—ಖಾಸಗೀ ಸಂಸ್ಥೆಗಳು ಮತ್ತು ಸಹಕಾರ ಸಂಘಗಳು ಓಪನ್ ಮಾರ್ಕೆಟ್‌ನಲ್ಲಿ ಧಾನ್ಯ ಕೊಂಡರೆ ಅವರಿಗೆ ಆಗತಕ್ಕಂಥ ನಷ್ಟಕ್ಕೆ ಅವರೇ ಜವಾಬ್ದಾರರು.

Maintaining of Roads in Shimoga District

*Q.—184. Sri V. S. LAKSHMIKANTHAPPA (Sagar).—

Will the Government be pleased to state :—

(a) the amount spent for maintaining the following roads in Shimoga District for the past three years :—

(i) Road from Shimoga to Shiralkoppa *via* Haregoppa;
(ii) Road from Shiralkoppa to Gondi *via* Anavatti;
(iii) Road from Sagar to Sorab *via* Kuppe;
(iv) Road from Ulavi to Sorab *via* Hosabale;
(v) Road from Sorab to Thananandi;
(vi) Road from Thananandi to Anavatti;